<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

**ಸಿ.ಸಿ ನಂಬ್ರಃ 25/2023**

**ಚಾಸಾ-2 ಫ್ರಾಸಾ-2**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ. ಅರುಣಕುಮಾರ ಶೆಟ್ಟಿ |
| ತಂದೆಯ ಹೆಸರು | : | ನಾರಾಯಣ ಶೆಟ್ಟಿ |
| ಪ್ರಾಯ | : | 45 ವರ್ಷ |
| ಉದ್ಯೋಗ | : | ಕೃಷಿ |
| ವಾಸ | : | ಹೊಸೂರು |

ದಿನಾಂಕಃ **07-11-2024** ಸಾಕ್ಷಿಗೆ ವಿಧಿಬದ್ಧವಾಗಿ ಪ್ರಮಾಣವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>

ದಿಃ **13-02-2023** ರಂದು ನಾನು, ಚಾಸಾ-3 ಮತ್ತು ಚಾಸಾ-4 ರವರು ಕುಂದಾಪುರದಿಂದ ಹೊಸೂರಿನ ನಮ್ಮ ಮನೆಗೆ ಹೋಗುತ್ತಿದ್ದೇವು, ಇಡೂರು ಕುಂಜ್ಞಾಡಿ ಗ್ರಾಮದ ಜನ್ನಾಲ ಮೇಲಜಡ್ಡು ಎಂಬಲ್ಲಿ ಬೋಲೇರೋ ವಾಹನ ನಮ್ಮ ಕಾರನ್ನು ಓವರಟೇಕ ಮಾಡಿ ಮೋಟಾರ ಸೈಕಲಗೆ ಡಿಕ್ಕಿ ಹೊಡೆದಿರುತ್ತದೆ, ಅದರ ಪರಿಣಾಮ ವಾಹನ ಸವಾರ ಬೈಕ ಸಮೇತ ರಸ್ತೆಗೆ ಬಿದ್ದಿರುತ್ತಾನೆ, ಅಪಘಾತ ಬೋಲೇರೋ ವಾಹನದ ತಪ್ಪಿನಿಂದ ಆಗಿರುತ್ತದೆ, ಬೋಲೇರೋ ವಾಹನದ ಸಂ, ಕೆಎ-15/9558 ಆಗಿರುತ್ತದೆ, ಮೋಟಾರ ಸೈಕಲ ಸಂ, ಕೆಎ-20/ಹೆಚ್4578 ಆಗಿರುತ್ತದೆ, ಅಪಘಾತ ಆದಾಗ ನಾವು ಮೋಟಾರ ಸೈಕಲ ಸವಾರನನ್ನು ಎತ್ತುತ್ತಿದ್ದೇವು, ಹಾಗಾಗಿ ಬೋಲೇರೋ ವಾಹನದ ಚಾಲಕನನ್ನು ನೋಡಿರುವುದಿಲ್ಲ,

ನಂತರ ಮೃತ ದೇಹವನ್ನು ಶವಾಗಾರಕ್ಕೆ ತೆಗೆದುಕೊಂಡು ಬಂದಿರುತ್ತೇವೆ, ಸಾಕ್ಷಿಗೆ ಪೋಟೋ ತೋರಿಸಲಾಗಿ, ಶವಾಗಾರದಲ್ಲಿ ತೆಗೆದಿರುತ್ತಾರೆ, ಅದರಲ್ಲಿ ತಾವು ಇರುವುದಾಗಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-10 ಎಂದು ಗುರುತಿಸಲಾಯಿತು, ಸಾಕ್ಷಿಗೆ ಭಾವಚಿತ್ರಗಳನ್ನು ತೋರಿಸಲಾಗಿ, ಅರದಲ್ಲಿ ಬೋಲೇರೋ ವಾಹನ ಮತ್ತು ಬೈಕನ್ನು ನೋಡಿ ಗುರುತಿಸಿದ್ದು, ಕಾರಣ ಅವುಗಳನ್ನು ನಿಪಿ-11 ರಿಂದ ನಿಪಿ-13 ಎಂದು ಗುರುತಿಸಲಾಯಿತು,

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸಂಸಂಅಂರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು,)

<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಪೊಲೀಸರು ಶವಾಗಾರದಲ್ಲಿ ಮಹಜರು ಮಾಡಿದ್ದು, ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸದರಿ ಮಹಜರನಲ್ಲಿ ತಮ್ಮ ಸಹಿಯನ್ನು ನೋಡಿ ಗುರುಸಿರುತ್ತಾರೆ. ಸದರಿ ಮಹಜರನ್ನು ನಿಪಿ-14 ಎಂದು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಅಪಘಾತಪಡಿಸಿದ ಬೋಲೇರೋ ವಾಹನ ಹೆಚ್.ಪಿ. ಗ್ಯಾಸ ಸಾಗಿಸುವ ವಾಹನ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಆರೋಪಿ ಬೋಲೇರೋ ವಾಹನದ ಚಾಲಕರಾಗಿದ್ದರು ಎಂದರೆ ನಾನು ನೋಡಿರುವುದಿಲ್ಲ. ಬೋಲೇರೋ ವಾಹನದ ಚಾಲಕನ ಅತೀವೇಗ ಹಾಗೂ ಅಜಾಗರೂಕತೆಯ ಚಾಲನೆಯೇ ಅಪಘಾತಕ್ಕೆ ಕಾರಣ ಎಂದರೆ ಸರಿ. ಆರೋಪಿಯನ್ನು ನೋಡಿರುವುದಾಗಿ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂಂದರೆ ಸರಿಯಲ್ಲ. ಅಪಘಾತವಾಗಿ ತುಂಬಾ ದಿನ ಆದ ಕಾರಣ ಕೆಲವು ವಿಷಯಗಳು ಮರೆತುಹೋಗಿವೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಬಿ ಎಸ್ ಹೆಚ್ ರವರಿಂದಃ</u>

ಜನ್ನಾಲು ಮೇಲಜಡ್ಡು ಮಣ್ಣು ರಸ್ತೆ ಕಡೆಯಿಂದ ಜಡ್ಕಲ ಕಡೆಗೆ ಹೋಗುವ ರಸ್ತೆ ದಿಬ್ಬ ಆರಂಭ ಆಗುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ದಿಬ್ಬ ಹತ್ತಲು ಗೇರ್ ಬದಲಾಯಿಸಬೇಕು ಎಂದರೆ ಸರಿ. ನಾವು ಹೋಗುವಾಗ ನಮ್ಮ ಮುಂದೆಯೇ ಅಪಘಾತ ಆಗಿರುತ್ತದೆ. ನಾವು ಇಳಿದು ಹೋಗುವಾಗ 1 ನಿಮಿಷ ಆಗಿರುತ್ತದೆ. ಅಪಘಾತ ಆದಾಗ ನಾವು ಇಳಿದು ಹೋಗಿರುತ್ತೇವೆ. ನಾವು ಹೋದಾಗ ಆ ವ್ಯಕ್ತಿ ಕೆಳಗೆ ಬಿದ್ದಿದ್ದರು. ನಾವು ಕುಂದಾಪುರದಿಂದ 4-00 ಗಂಟೆಗೆ ಹೊರಟಿರುತ್ತೇವೆ. ನಾವು ಕಾರಿನಲ್ಲಿ ಹೋಗುತ್ತಿದ್ದು, ಆ ಕಾರು ನನ್ನದೇ ಆಗಿದ್ದು, ನಾನೇ ಚಲಾಯಿಸುತ್ತಿದ್ದೆ. ನನ್ನ ಎಡಭಾಗದಲ್ಲಿ ಚಾಸಾ-3 ಮತ್ತು ಹಿಂಬದಿಯಲ್ಲಿ ಚಾಸಾ-4 ರವರು ಕುಳಿತಿದ್ದರು.

ಅಪಘಾತವಾದಾಗ ಜನ ಸೇರಿರುತ್ತಾರೆ. ಅಪಘಾತ ಆದ ನಂತರ ಜನ ಸೇರಿರುತ್ತಾರೆ. ಆ ದಿನ ನಾನು ವಾಹನದ ಚಾಲಕನನ್ನು ನೋಡಿರಲಿಲ್ಲ, ಆದರೆ ವಾಹನ ಮತ್ತು ಅದರ ನಂಬರ ನೋಡಿರುತ್ತೇನೆ. ನಾನು ಗ್ರಾಮ ಪಂಚಾಯತಿಯ ಅಧ್ಯಕ್ಷ ಎಂದರೆ ಸರಿ. ಆ ಭಾಗದಲ್ಲಿ ಯಾವುದಾದರೂ ಅಪಘಾತವಾದರೆ ಅಧ್ಯಕ್ಷರು ಮುತುವರ್ಜಿ ವಹಿಸುತ್ತಾರೆ ಎಂದರೆ ಸರಿ. ಮೃತ ವ್ಯಕ್ತಿ ನಮ್ಮ ಊರು ಮನೆಯವರು ಎಂದರೆ ಸರಿ. ಮೃತರ ಕುಟುಂಬದವರು ಪರಿಹಾರ ಪಡೆಯಲು ನ್ಯಾಯಾಲಯಕ್ಕೆ ಅರ್ಜಿ ಹಾಕಿದ್ದಾರೆ ಎಂದರೆ ಸರಿ. ನಾನು ಅಪಘಾತ ಸ್ಥಳದಲ್ಲಿ ಸುಮಾರು ಅರ್ಧ ಗಂಟೆಯವರೆಗೆ ಇದ್ದೆ. ನಾನು ನನ್ನ ಕಾರಿನಲ್ಲಿ ಹೋಗಿದ್ದೆ, ಅಂಬ್ಯೂಲೆನ್ಸನಲ್ಲಿ ಚಾಸಾ-3 ರವರು ಹೋಗಿರಬಹುದು.

ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಆ ದಿನ ಮೃತ ವ್ಯಕ್ತಿ ಬಸ್ಸನ್ನು ಓವರಟೇಕ ಮಾಡಿ ಗ್ಯಾಸ ಸಾಗಿಸುತ್ತಿದ್ದ ವಾಹನಕ್ಕೆ ಅಪಘಾತಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಮೃತ ವ್ಯಕ್ತಿಯ ತಪ್ಪಿನಿಂದ ಅಪಘಾತ ಆಗಿದ್ದು, ಮೃತರಿಗೆ ಪರಿಹಾರ ಸಿಗಲೆಂದು ಬೋಲೇರೋ ವಾಹನದ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ.